ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

MANGALORE ELECTRICIRTY SUPPLY COMPANY LIMITED

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

MESCOM

ದೂರವಾಣಿ ಸಂಖ್ಯೆ: 0824-2885766

CIN:U40109KA2002SGC030425

ವಿಷಯ : ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡುವ ಕಂಪನಿ ಅಧಿಕಾರಿ/ನೌಕರರ ಮಕ್ಕಳಿಗೆ ಪ್ರೋತ್ಸಾಹ ಧನ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ದಿನಾಂಕ 20.12.2008 ರಂದು ನಡೆದ 29ನೇ ನಿರ್ದೇಶಕರ ಮಂಡಳ ಸಭೆಯ ನಡವಳ ಸಂಖ್ಯೆ: 29/33.
2. ಕಂಪನಿ ಆದೇಶ ಸಂಖ್ಯೆ: 15417-46 ದಿನಾಂಕ 11.02.2009.
3. ಮಾನ್ಯ ವ್ಯ.ನಿ ರವರಿಂದ ಅನುಮೋದಿತ ಈ ಕಛೇರಿ ಟಿಪ್ಪಣಿ ದಿನಾಂಕ 02.08.2019.

**--**--**

ಪೀಠಿಕೆ:

1. ದಿನಾಂಕ 20.12.2008 ರಂದು ನಡೆದ 29ನೇ ನಿರ್ದೇಶಕರ ಮಂಡಳ ಸಭೆಯ ನಡವಳ ಸಂಖ್ಯೆ: 29/33ರಲ್ಲಿ ಅನುಮೋದಿಸಿರುವಂತೆ ಕಂಪನಿಯು ಅಧಿಕಾರಿ/ನೌಕರರ ಮಕ್ಕಳ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಸಾಧಿಸುವಲ್ಲಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಂಪನಿಯ ಕರ್ತವ್ಯ ನಿರತ ಖಾಯಂ ಅಧಿಕಾರಿಗಳು/ನೌಕರರುಗಳ ಮಕ್ಕಳು ಕೇಂದ್ರ/ರಾಜ್ಯ ಪಠ್ಯ ಕ್ರಮಗಳಲ್ಲಿ 10ನೇ ತರಗತಿ/ಎಸ್.ಎಸ್.ಎಲ್.ಸಿ ಮತ್ತು ಎರಡನೇ ಪಿಯುಸಿ ತರಗತಿಯ ಅಂತಿಮ ಪರೀಕ್ಷೆಗಳಲ್ಲಿ ಶೇಕಡಾ 90 ಮತ್ತು ಹೆಚ್ಚಿನ ಅಂಕ ಗಳಿಸಿ ಉತ್ತೀರ್ಣರಾದಲ್ಲಿ ಕಂಪನಿ ವತಿಯಿಂದ ಅಂತಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತಲಾ ರೂ. 2,500/-ರಂತೆ ಪ್ರೋತ್ಸಾಹ ಧನವನ್ನು ಮಂಜೂರು ಮಾಡಿ ಉಲ್ಲೇಖ (2)ರಲ್ಲಿ ಆದೇಶಿಸಲಾಗಿರುತ್ತದೆ.
2. ಸದರಿ ಆದೇಶದನ್ವಯ 2007-08ರಿಂದ 2018-19 ಸಾಲಿನವರೆಗೂ ಅಧಿಕಾರಿ/ನೌಕರರ ಪ್ರತಿಭಾನ್ವಿತ ಮಕ್ಕಳಿಗೆ ಪ್ರೋತ್ಸಾಹಧನವನ್ನು ಮಂಜೂರು ಮಾಡಿ ಸ್ವಾತಂತ್ರ್ಯ ದಿನಾಚರಣೆ/ಗಣರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಕಂಪನಿ ವತಿಯಿಂದ ಅಭಿನಂದಿಸಲಾಗಿರುತ್ತದೆ.
3. ಸದರಿ ಆದೇಶವನ್ನು ಹೊರಡಿಸಿ ಸುಮಾರು 10 ವರ್ಷಗಳು ಮೀರಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಬದಲಾವಣೆಗಳಾಗಿರುವುದರಿಂದ ನಗದು ಪುರಸ್ಕಾರವನ್ನು ಮತ್ತು ಪ್ರತಿಭಾನ್ವಿತೆಯನ್ನು ಪರಿಗಣಿಸಲು ಮಾನದಂಡವನ್ನು ಪರಿಷ್ಕರಿಸುವುದು ಸೂಕ್ತವಾಗಿರುತ್ತದೆ.
4. ಆದ್ದರಿಂದ, ಕಂಪನಿಯ ಖಾಯಂ ಅಧಿಕಾರಿಗಳು/ನೌಕರರುಗಳ ಮಕ್ಕಳು ಕೇಂದ್ರ/ರಾಜ್ಯ ಪಠ್ಯ ಕ್ರಮಗಳಲ್ಲಿ/ವಿಶ್ವವಿದ್ಯಾನಿಲಯಗಳಲ್ಲಿ ಈ ಕೆಳಗಿನಂತೆ ಅಂಕಗಳಿಸಿದ ಪ್ರತಿಭಾನ್ವಿತರಿಗೆ ರೂ. 5000/- ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲು ಉದ್ದೇಶಿಸಲಾಗಿದೆ.

| | |
|---|---|
| 10ನೇ ತರಗತಿ/ಎಸ್.ಎಸ್.ಎಲ್.ಸಿ | ಶೇಕಡಾ 90 ಮತ್ತು ಅದಕ್ಕಿಂತ ಹೆಚ್ಚು |
| ದ್ವಿತೀಯ ಪಿ.ಯು.ಸಿ | ಶೇಕಡಾ 85 ಮತ್ತು ಅದಕ್ಕಿಂತ ಹೆಚ್ಚು |
| ಪದವಿ ಮತ್ತು ಸ್ನಾತಕೋತ್ತರ ಪದವಿ | ಚಿನ್ನದ ಪದಕ ವಿಜೇತರು |
| | ಶೇಕಡಾ 85 ಮತ್ತು ಅದಕ್ಕಿಂತ ಹೆಚ್ಚು |

5. ಮುಂದುವರೆದು, ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಕಂಪನಿಯ ಖಾಯಂ ಅಧಿಕಾರಿಗಳು/ನೌಕರರುಗಳ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಿ ಅಭಿನಂದಿಸಲು ಉದ್ದೇಶಿಸಲಾಗಿದೆ.

2.....

ಆದ್ದರಿಂದ, ಈ ಕೆಳಗಿನಂತೆ ಆದೇಶ.

**ಆದೇಶ**

ಸಂಖ್ಯೆ:ಪ್ರ.ವ್ಯ(ಆ)/ಸ.ಪ್ರ.ವ್ಯ(ಆ)/ಹಿಸ-117/19-20/ 415-20 ದಿನಾಂಕ : 03/08/19

ಪೀಠಿಕೆಯಲ್ಲಿ ವಿಶ್ಲೇಷಿಸಿರುವಂತೆ, 2018-19ರ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಕಂಪನಿಯ ಖಾಯಂ ಅಧಿಕಾರಿಗಳು/ನೌಕರರುಗಳ ಮಕ್ಕಳು ಕೇಂದ್ರ/ರಾಜ್ಯ ಪಠ್ಯ ಕ್ರಮಗಳಲ್ಲಿ/ವಿಶ್ವವಿದ್ಯಾನಿಲಯಗಳಲ್ಲಿ ಈ ಕೆಳಗಿನಂತೆ ಅಂಕಗಳಿಸಿದ ಪ್ರತಿಭಾನ್ವಿತರಿಗೆ ರೂ. 5000/- ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲು ಅನುಮೋದನೆ ನೀಡಲಾಗಿದೆ.

| | |
|---|---|
| 10ನೇ ತರಗತಿ/ಎಸ್.ಎಸ್.ಎಲ್.ಸಿ | ಶೇಕಡಾ 90 ಮತ್ತು ಅದಕ್ಕಿಂತ ಹೆಚ್ಚು |
| ದ್ವಿತೀಯ ಪಿ.ಯು.ಸಿ | ಶೇಕಡಾ 85 ಮತ್ತು ಅದಕ್ಕಿಂತ ಹೆಚ್ಚು |
| ಪದವಿ ಮತ್ತು ಸ್ನಾತಕೋತ್ತರ ಪದವಿ | ಚಿನ್ನದ ಪದಕ ವಿಜೇತರು |
| | ಶೇಕಡಾ 85 ಮತ್ತು ಅದಕ್ಕಿಂತ ಹೆಚ್ಚು |

ಮುಂದುವರೆದು, ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಕಂಪನಿಯ ಖಾಯಂ ಅಧಿಕಾರಿಗಳು/ನೌಕರರುಗಳ ಪ್ರತಿಭಾನ್ವಿತ ಮಕ್ಕಳನ್ನು ಅವರ ಹೆತ್ತವರೊಂದಿಗೆ ಸನ್ಮಾನಿಸಿ ಅಭಿನಂದಿಸಲು ಅನುಮೋದನೆ ನೀಡಲಾಗಿದೆ.

ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಅವರ ವ್ಯಾಪ್ತಿಯ ಅಧಿಕಾರಿ/ನೌಕರರಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಗ್ರಹಿಸುವುದು.

ವೇತನ ಬಟವಾಡೆ ಅಧಿಕಾರಿಗಳು ಮತ್ತು ಲೆಕ್ಕಾಧಿಕಾರಿ(ಆಂ.ಪ)ರವರು ಅಂಕಪಟ್ಟಿಯ ಪ್ರತಿಯನ್ನು ಮೂಲ ಅಂಕಪಟ್ಟಿಯೊಂದಿಗೆ ಪರಿಶೀಲಿಸಿ, ಅಂಕಪಟ್ಟಿಯ ಪ್ರತಿಯ ಮೇಲೆ ದೃಢೀಕರಿಸಿ ಹಾಗೂ ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಬಗ್ಗೆ ದಾಖಲೆಯನ್ನು ಪ್ರತಿಭಾನ್ವಿತರ ಸ್ವಯಂ ದೃಢೀಕರಣ ಪಡೆದು ವಲಯಾಧಿಕಾರಿ/ವೃತ್ತಾಧಿಕಾರಿ/ವಿಭಾಗಾಧಿಕಾರಿಯವರ ಶಿಫಾರಸ್ಸಿನೊಂದಿಗೆ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು
ರವರಿಂದ ಅನುಮೋದಿತವಾಗಿದೆ"

ಆದೇಶದ ಮೇರೆಗೆ,
3/8/19
ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.ಅ)
ಮೆಸ್ಕಾಂ.,

**ಪ್ರತಿಗಳು :**

1. ಮುಖ್ಯ ಇಂಜಿನಿಯರ್(ವಿ), ಮೆಸ್ಕಾಂ., ಮಂಗಳೂರು/ಶಿವಮೊಗ್ಗ ವಲಯ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವೃತ್ತಗಳು. ಡಿ.ಸಿ.ಸಿ & ಸ್ಕಾಡಾ/ ಆರ್.ಟಿ.ವೃತ್ತ/ಮಾ.ಸಂ.ಅ. ಕೇಂದ್ರ,ಮಂಗಳೂರು.
4. ಕಂಪೆನಿ ಕಾರ್ಯದರ್ಶಿ, ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
6. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐ.ಟಿ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು- ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯಕ್ರಮ ಕೈಗೊಳ್ಳುವುದು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ವಿಭಾಗಗಳು.
8. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ., ಕಾ ಮತ್ತು ಪಾ ಉಪವಿಭಾಗಗಳು.
9. ಲೆಕ್ಕಾಧಿಕಾರಿ(ಹುಂಡಿಗಳು)/(ಸಾ.ಸಂ&ಸಂ), ಮೆಸ್ಕಾಂ., ಕಾರ್ಪೊರೇಟ್ ಕಛೇರಿ, ಮಂಗಳೂರು.
10. ಹಿರಿಯ ಆಪ್ತ ಕಾರ್ಯದರ್ಶಿ, ವ್ಯ.ನಿ/ನಿ(ತಾಂ), ಮೆಸ್ಕಾಂ.,
11. ಆಪ್ತ ಕಾರ್ಯದರ್ಶಿ, ಮು.ಆ.ಅ.,/ಆ.ಸ.(ಆಂ.ಪ), ಮೆಸ್ಕಾಂ.,

} ತಮ್ಮ ಅಧೀನ ಎಲ್ಲಾ ಅಧಿಕಾರಿ/ನೌಕರರ ಗಮನಕ್ಕೆ ತರಲು ಕೋರಲಾಗಿದೆ.